**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 963/2019

ಪಿಡಬ್ಲು :3 ಸಿಡಬ್ಲು :7

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ಅರಿಹಂತ ಮಾಹವೀರ ಬಾಬನ್ನವರ |
| ತಂದೆಯ ಹೆಸರು | : ಶ್ರೀ ಮಾಹವೀರ ಬಾಬನ್ನವರ |
| ವಯಸ್ಸು | : 35 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ್ತವ್ಯ | : ಮುಗಳಖೋಡ |
| ದಿನಾಂಕ | : 25-07-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ1 ನೇಮಿನಾಥ, ಚಾಸಾಃ 8 ಪ್ರೂನ್ನಂಜಿ ಬಾಬನ್ನವರ, ಚಾಸಾಃ 10 ಅಜಿತ ಬಾಬನ್ನವರ ಚಾಸಾಃ11 ಹಣಮಂತ ಬಾಬನ್ನವರ ಅವರು ನನ್ನ ಅಣ್ಣತಮ್ಮಂದಿರು. ಚಾಸಾಃ 9 ಪ್ರವೀಣ ಆದಪ್ಪಗೋಳ, ಚಾಸಾಃ 12 ಕುರಾಡೆ, ಚಾಸಾಃ13 ರಾಮಚಂದ್ರ ಕುರಾಡೆ ಅವರುಗಳು ಮುಗಳಖೋಡದಲ್ಲಿ ವಾಸವಾಗಿರುತ್ತಾರೆ. ಅವರು ನನ್ನ ಪರಿಚಯಸ್ಥರು. ಚಾಸಾಃ 14 ಮಿಲನ ದೇವನ್ನವರ, ಚಾಸಾಃ 15 ಮಲ್ಲು ಕುರಾಡೆ ಅವರು ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಾರೆ. ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಿರುವ ಆರೋಪಿತರು ನನಗೆ ಗೊತ್ತಿರುತ್ತಾರೆ.

2. ಮುಗಳಖೋಡ ಗ್ರಾಮದಲ್ಲಿ ನಿವೇಶನ ಸಂಖ್ಯೆ 643 ನಮ್ಮ ಕುಟುಂಬಕ್ಕೆ ಸೇರಿದ ಸ್ವತ್ತಾಗಿರುತ್ತದೆ. ಸದರಿ ಸ್ವತ್ತು ನಮ್ಮ ಚಿಕ್ಕಪ್ಪನ ಮಗ ರಾವುಸಾಬರವರ ಹೆಸರಿನಲ್ಲಿದೆ.

3. ದಿಃ 26-08-2017 ರಂದು ಬೆಳಗ್ಗೆ 9:00 ಗಂಟೆ ಸಮಯದಲ್ಲಿ ನಿವೇಶನ ಸಂಖ್ಯೆ 643 ರಲ್ಲಿ ಕಟ್ಟಡ ಕಟ್ಟುವ ವಿಚಾರವಾಗಿ ನಾನು, ಚಾಸಾಃ 1 ನೇಮಿನಾಥ, ಚಾಸಾಃ 8 ಪ್ರೊನ್ನಂಜಿ, ಚಾಸಾಃ 10 ಅಜಿತ, ಚಾಸಾಃ 11 ಹಣಮಂತ ಬಾಬನ್ನವರ ಹೋಗಿದ್ದೇವು. ಸ್ಥಳದಲ್ಲಿ ನಾವು ಪಾಯ ತೆಗೆದು ಪೂಜೆ ಮಾಡುತ್ತಿದ್ದೇವು. ಪ್ರಕಾಶ ಕಡಕೋಳ ಎನ್ನುವವರು ನಾವು ತೆಗೆದಿದ್ದ ಪಾಯದ ಒಳಗೆ ಬಿದ್ದರು, ನಾವು ಆತನನ್ನು ರಕ್ಷಿಸುತ್ತಿದ್ದೇವು, ಆಗ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದರು.

4. ಆರೋಪಿತರು ನಮಗೆ ನಿಮ್ಮದು ಬಹಳ ಆಗಿದೆ ಎಂದು ಅವಾಚ್ಯ ಶಬ್ದಗಳಿಂದ ಬೈದರು. 1 ನೇ ಆರೋಪಿ ನನಗೆ ಕಬ್ಬಿಣದ ರಾಡ್‌ನಿಂದ ಎರಡೂ ಕೈಮೇಲೆ ಹೊಡೆದರು. 4 ನೇ ಆರೋಪಿ ಕಲ್ಲಿನಿಂದ ನನ್ನ ತಲೆಗೆ ಹೊಡೆದನು. 5 ನೇ ಆರೋಪಿ ಶ್ರೀಶೈಲ ಇವನು ಬಡಿಗೆಯಿಂದ ಚಾಸಾಃ 1 ನೇಮಿನಾಥನಿಗೆ ಹೊಡೆದನು. 2 ನೇ ಆರೋಪಿ ಚಾಸಾಃ 6 ಶ್ರೀಕಾಂತ ಅವರಿಗೆ ಕಬ್ಬಿಣದ ರಾಡನಿಂದ ಎಡಗಾಲಿನ ಮೇಲೆ ಹೊಡೆದನು. 3 ನೇ ಆರೋಪಿ ವಿಠ್ಠಲ ಕಲ್ಲಿನಿಂದ ಚಾಸಾಃ 6 ಶ್ರೀಕಾಂತ ಅವರ ತಲೆಗೆ ಹೊಡೆದನು. 9 ನೇ ಆರೋಪಿ ಚಿದಾನಂದ ಕಲ್ಲಿನಿಂದ ಚಾಸಾಃ 8 ಪ್ರೊನ್ನಂಜಿ ಅವರ ಎಡಕಣ್ಣಿಗೆ ಹೊಡೆದನು. 14 ನೇ ಆರೋಪಿ ಅಮರ ಬಾವಿಮನಿ ಚಾಸಾಃ 9 ಪ್ರವೀಣ ಅವರಿಗೆ ಕಬ್ಬಿಣದ ರಾಡ್‌ನಿಂದ ಬಲಗಾಲಿಗೆ ಹೊಡೆದನು. ಊರಿನವರು ಅಲ್ಲಿಗೆ ಬಂದು ಜಗಳ ಬಿಡಿಸಿದರು. ಸ್ಥಳದಲ್ಲಿದ್ದವರು ನಮ್ಮನ್ನು ಚಿಕಿತ್ಸೆಗಾಗಿ ನಾರಗೊಂಡ ಆಸ್ಪತ್ರೆಗೆ ಕರೆದುಕೊಂಡು ಹೋದರು.

5. ನಾರಗೊಂಡ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಗ ಪೋಲಿಸರು ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಘಟನೆ ಸಮಯದಲ್ಲಿ ನಾನು ಧರಿಸಿದ್ದ ಬಟ್ಟೆಗಳು ರಕ್ತ ಆಗಿದ್ದು ಅವುಗಳನ್ನು ನಾನು ಆಸ್ಪತ್ರೆಯಲ್ಲಿ ಪೋಲಿಸರಿಗೆ ನೀಡಿದ್ದೇನೆ. ಆ ಬಗ್ಗೆ ಪೋಲಿಸುರ ನನ್ನ ಸಹಿಯನ್ನು ಮಾಡಿಸಿಕೊಂಡಿದ್ದಾರೆ. ಪಂಚನಾಮೆಯ ಮೇಲಿರುವ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪಂಚನಾಮೆಯನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದೆ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿಃ 2 (ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ

ಪೋಲಿಸರು ಪೋಟೋ ತೆಗೆದಿದ್ದಾರೆ. ಪೋಟೋವನ್ನು ನೋಡಿ ಸಾಕ್ಷಿ ತಮ್ಮ ಇರುವಿಕೆಯನ್ನು ಗುರುತಿಸಿದ್ದಾರೆ. ಆಧ್ನನ್ನು ಈಗಾಗಲೇ ನಿಪಿಃ 3 ಎಂದು ಗುರುತಿಸಲಾಗಿದೆ. ಈಗ ನಾನು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

6. ಪೋಲಿಸರಿಗೆ ನಾನು ನೀಡಿದ ಬಿಳಿ ಬಣ್ಣದ ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಬಿಳಿ ಬಣ್ಣದ ಶರ್ಟನ್ನು ಈಗಾಗಲೇ ಮು.ಮಾ.7 ಎಂದು ಗುರುತಿಸಲಾಗಿದೆ. ನ್ಯಾಯಾಲಯದಲ್ಲಿರುವ ಬಂಬು ಬಡಿಗೆಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ಮು.ಮಾ.1, ಎರಡು ಕಬ್ಬಿಣದ ರಾಡ್‌ಗಳನ್ನು ಮತ್ತು ಕಲ್ಲುಗಳನ್ನು ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.2, ಮು.ಮಾ.3 ಮತ್ತು ಮು.ಮಾ.4 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

ಘಟನೆ ನಡೆದ ದಿನ ನಾವು ಅಂದರೆ ನಮ್ಮ ಕುಟುಂಬದ ಅಣ್ಣತಮ್ಮಂದಿರು ಸುಮಾರು 10-12 ಜನ ಸ್ಥಳಕ್ಕೆ ಹೋಗಿದ್ದೇವು. ಬಾಹುಬಲಿ ಹುಲ್ಲೋಳ್ಳಿ ಎನ್ನುವವರು ನಮ್ಮ ಸಂಬಂಧಿಕರು. ಅವರೂ ಸಹ ಘಟನೆ ನಡೆದ ದಿನದಂದು ಬಂದಿದ್ದರು ಎನ್ನುವುದು ಸರಿಯಲ್ಲ. ಬಾಹುಬಲಿ ಹುಲ್ಲೋಳ್ಳಿ ಅವರು ಅಬಕಾರಿ ಅಧಿಕಾರಿ ಎನ್ನುವುದು ಸರಿ. ಅವರು ಈಗ ಎಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎನ್ನುವುದು ಗೊತ್ತಿಲ್ಲ.

2. ನಾನು ಪೋಲಿಸರು ಮುಂದೆ ದಿಃ 27-08-2017 ರಂದು ನೀಡಿದ ಹೇಳಿಕೆಯಲ್ಲಿ " ನಮ್ಮ ಸಂಬಂಧಿಕರಾದ ಬಾಹುಬಲಿ ಹುಲ್ಲೋಳ್ಳಿ ಮತ್ತು ಅವರ ಸಂಬಂಧಿಕರಿಗೆ ಕರೆಸಿದ್ದೇವು ಅಲ್ಲಿ ನಾವು ಪೂಜೆ ಮಾಡಿ ಜಾಗ ಸ್ವಚ್ಚ ಮಾಡುತ್ತಿದ್ದೇವು ಆಗ ಬಾಹುಬಲಿ ಹುಲ್ಲೋಳ್ಳಿ ಮತ್ತು ಅವರ ಸಂಬಂಧಿಕರು ಕಟ್ಟಡ ಕಟ್ಟುವ ಜಾಗೆಯ ಉತ್ತರ ಬದಿಗೆ ದೂರ ಕುಳಿತಿದ್ದರು " ಎಂದು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಡಿಃ 2 ಎಂದು ಗುರುತಿಸಲಾಯಿತು.

3. ಕೃತ್ಯ ನಡೆದ ದಿನ ಆರೋಪಿತರು ಪುರಸಭೆ ಅಧಿಕಾರಿಗಳನ್ನು ಸ್ಥಳಕ್ಕೆ ಕರೆದುಕೊಂಡು ಬಂದು ಕಟ್ಟಡ ಕಟ್ಟದಂತೆ ನಮಗೆ ಹೇಳಿಸಿದ್ದರು ಎನ್ನುವುದು ಸರಿಯಲ್ಲ. ದಿಃ 27-08-2017 ರಂದು ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ " ಇವರೆಲ್ಲರೂ ಕೂಡಿಕೊಂಡು ನಮ್ಮೂರ ಪುರಸಭೆ ಮುಖ್ಯಾಧಿಕಾರಿಗೆ ಹಾಗೂ ಅಧ್ಯಕ್ಷರಿಗೆ ಕರೆದುಕೊಂಡು ಬಂದು ಇಲ್ಲಿ ಕಟ್ಟಡ ಕಟ್ಟಬೇಡಿ ಅಂತಾ ಅಂದಾಗ ಪುರಸಭೆ ಅಧಿಕಾರಿ ಈಗ ಕಟ್ಟಡ ಕಟ್ಟಬೇಡಿರಿ ಅಂತಾ ಹೇಳುವಷ್ಟರಲ್ಲಿ " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿಃ 2 (ಎ) ಎಂದು ಗುರುತಿಸಲಾಯಿತು.

4. ನಾವು ಆರೋಪಿತರ ಮೇಲೆ ಹಲ್ಲೆ ಮಾಡಿದ್ದೇವು ಎಂದು ಹೇಳಿ ಆರೋಪಿತರು ನನ್ನನ್ನು ಸೇರಿದಂತೆ ನನ್ನ ಅಣ್ಣತಮ್ಮಂದಿರು ಹಾಗೂ ಇತರರು ಒಟ್ಟು 33 ಜನರ ಮೇಲೆ ಕೇಸ ಕೊಟ್ಟಿದ್ದು, ಅದು ಇದೇ ನ್ಯಾಯಾಲಯದಲ್ಲಿ ನಡೆಯುತ್ತಿದ್ದೆ ಎನ್ನುವುದು ಸರಿ.

5. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಎನ್ನುವುದು ಸರಿಯಲ್ಲ. ನ್ಯಾಯಾಲಯದಲ್ಲಿರುವ ಮು.ಮಾ.1 ರಿಂದ 7 ಕ್ಕೂ ಆರೋಪಿತರಿಗೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ.

6. ನಿವೇಶನ ಸಂಖ್ಯೆ 643 ಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ನಮ್ಮ ಕುಟುಂಬದವರು ಆರ್ಥಿಕವಾಗಿ, ರಾಜಕೀಯವಾಗಿ ಬಲಿಷ್ಠರಾಗಿ ಸರ್ಕಾರದ ಉನ್ನತ ಹುದ್ದೆಯಲ್ಲಿರುವುದರಿಂದ ಅಧಿಕಾರ ದುರುಪಯೋಗಪಡಿಸಿಕೊಂಡು ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಆರೋಪಿತರ ಮೇಲೆ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲು:5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರು</u>**

1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.